(ಈ) ಸರ್ಕಾರ ಚುನಾವಣಾ ಪ್ರಕ್ರಿಯೆಯನ್ನು ರದ್ದುಪಡಿಸಲು ಕ್ರಮ ಕೈಗೊಂಡಿರುವುದಿಲ್ಲ ಇದು ಶಾಸನಬದ್ಧ ಪ್ರಕ್ರಿಯೆ ಆಗಿದ್ದು, ಪ್ರಕರಣವು ಸಹಕಾರ ಸಂಘಗಳ ನಿಬಂಧಕರ ನ್ಯಾಯಾಲಯದಲ್ಲಿ ಇತ್ಯರ್ಥಕ್ಕಾಗಿ ಬಾಕಿ ಇರುತ್ತದೆ

701 (465) **ಶ್ರೀ ಬಾದರ್ಲಿ ಹಂಪನಗೌಡ** (ಸಿಂಧನೂರು) –ಸಹಕಾರ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ರಾಜ್ಯ ಸರ್ಕಾರ ರೈತರಿಗೆ ಘೋಷಣೆ ಮಾಡಿರುವ ಅಸಲು ಮತ್ತು ಬಡ್ಡಿ ಮನ್ನಾ ಮಾಡಿರುವ ಮೊತ್ತವೆಷ್ಟು? ಹಾಗೂ ಯಾವ ಯಾವ ಸಹಕಾರಿ ಸಂಸ್ಥೆಗಳಿಂದ ಅಸಲು ಮತ್ತು ಬಡ್ಡಿ ಮನ್ನಾ ಮಾಡಲಾಗಿದೆ? (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ರಾಜ್ಯ ಸರ್ಕಾರ ರೈತರಿಗ ಘೋಷಣೆ ಮಾಡಿದ ಅಸಲು ಮತ್ತು ಬಡ್ಡಿ ಮನ್ನಾ ಮಾಡಿರುವ ಒಟ್ಟು ಮೊತ್ತದ ಹಣವನ್ನು ಯಾವ ಸಹಕಾರಿ ಸಂಸ್ಥೆಗಳಿಂದ ನೀಡಲಾಗಿದೆ? ನೀಡಿದ ಮೊತ್ತವೆಷ್ಟು? (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

ಶ್ರೀ ಬಿ ಟಿ ದೇವೇಗೌಡ (ಸಹಕಾರ ಸಚಿವರು) –

(ಅ) ರಾಜ್ಯ ಸರ್ಕಾರವು ದಿನಾಂಕ 16–04–2007 ಮತ್ತು 15–05–2007 ರ ಆದೇಶಗಳಂತೆ ಮಾಡಿರುವ ಅಸಲು ಮತ್ತು ಬಡ್ಡಿ ಮನ್ನಾ ಮೊತ್ತವು ಸುಮಾರು ರೂ 2300/– ಕೋಟಿಯೆಂದು ಅಂದಾಜಿಸಲಾಗಿದೆ ಎಲ್ಲಾ ಜಿಲ್ಲೆಗಳಿಂದ ದೃಢೀಕೃತ ಬಿಲ್ಲುಗಳು ಬಂದ ನಂತರ ನಿಖರವಾದ ಮಾಹಿತಿಯು ಲಭ್ಯವಾಗುತ್ತದೆ

(ಆ) ಕೃಷಿ ಪತ್ತಿನ ವ್ಯವಸ್ಥೆಯಲ್ಲಿರುವ ಸಹಕಾರ ಸಂಘಗಳು / ಬ್ಯಾಂಕುಗಳು ದಿ 1–01–2006 ರಿಂದ 31–12–2006 ರ ಅವಧಿಯಲ್ಲಿ ರೈತರಿಗೆ ನೀಡಿರುವ ರೂ 25,000/– ದವರೆಗಿನ ಅಲ್ಪಾವಧಿ ಬೆಳೆಸಾಲವನ್ನು ಬಡ್ಡಿ ಸಹಿತ ಸರ್ಕಾರವು ಮನ್ನಾ ಮಾಡಿರುತ್ತದ ಹಾಗೂ ರೂ 25,000/– ಗಳಿಗೆ ಮೇಲ್ಪಟ್ಟು ಸಾಲ ಪಡೆದ ರೈತ ಸದಸ್ಯರು ರೂ 25,000/– ಕ್ಕಿಂತ ಹೆಚ್ಚಿನ ಬೆಳೆ ಸಾಲದ ಅಸಲನ್ನು ದಿನಾಂಕ 31–05–2007 ರೊಳಗೆ ಸಂಬಂಧಪಟ್ಟ ಸಹಕಾರಿ ಸಂಸ್ಥಗಳಿಗೆ ಮರುಪಾವತಿಸಿದಲ್ಲಿ ರೂ 25,000/– ಗಳ ಅಸಲು ಮತ್ತು ಮರುಪಾವತಿಸಿದ ದಿನಾಂಕದವರೆಗಿನ ಬಡ್ಡಿಯನ್ನು ಮನ್ನಾ ಮಾಡಲಾಗಿದೆ

(ಇ) ಸಾಲ ಬಡ್ಡಿ ಮನ್ನಾ ಬಾಬ್ತು ಸರ್ಕಾರವು 750 00 ಕೋಟಿ ರೂಗಳನ್ನು ಈಗಾಗಲೇ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಿಗೆ ನೀಡಿದ್ದು, ವಿವರಗಳನ್ನು ಅನುಬಂಧದಲ್ಲಿ ಕೂಡಲಾಗಿದೆ

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಬಾದರ್ಲಿ ಹಂಪನಗೌಡ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 465ರ ಅನುಬಂಧ

(ರೂ ಲಕ್ಷಗಳಲ್ಲಿ)

ಕ್ರ ಸಂ	ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಹೆಸರು	ರೂ 750 ಕೋಟಿಗಳ ಅನುದಾನದಲ್ಲಿ ಹಂಚಿಕೆ ಮಾಡಿ ಬಿಡುಗಡೆ ಮಾಡಿರುವ ಮೊತ್ತ
1	ಬೆಂಗಳೂರು	2505 87
2	ಕೋಲಾರ	155 28
3	ಚಿತ್ರದುರ್ಗ	1177 23
4	ಶಿವಮೊಗ್ಗ	4468 92
5	ದಾವಣಗೆರ	5026 92
6	ತುಮಕೂರು	2513 70
7	ಮೈಸೂರು	2167 41
8	ಮಂಡ್ಯ	4164 89
9	ಹಾಸನ	2713 28
10	ದಕ್ಷಿಣ ಕನ್ನಡ	2001 83
11	ಕೊಡಗು	1228 13
12	ಚಿಕ್ಕಮಗಳೂರು	737 31
13	ಬೆಳಗಾವಿ	11222 51
14	ಬಿಜಾಪುರ	7734 88
15	ಬಾಗಲಕೋಟೆ	6386 37
16	ಧಾರವಾಡ	3714 62
17	ಕೆನರಾ ಸಿರ್ಸಿ	2845 32
18	ಗುಲ್ಬರ್ಗಾ	2415 06
19	ಬೀದರ್	5655 75
20	ರಾಯಚೂರು	3228 72
21	ಬಳ್ಳಾರಿ	1936 00
22	ವಾಣಿಜ್ಯ ಬ್ಯಾಂಕುಗಳಿಗೆ ಅಬ್ಯರ್ಪಿಸಲ್ಪಟ್ಟಿರುವ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ	1000 00
	ಒಟ್ಟು	**75000 00**
		ರೂ 750 00 ಕೋಟಿಗಳು